# ಪಿ.ಎ.ಎಂ. ಸರ್ಕಾರಿ ಪ್ರೌಢಶಾಲೆ ಬನ್ನಿಕಲ್ಲು, ಹ ಬೊ ಹಳ್ಳಿ(ತಾ), ಬಳ್ಳಾರಿ(ಜಿ)

**ವಿಷಯ:- ಸಮಾಜ ವಿಜ್ಞಾನ** **ಅರ್ಧ ವಾರ್ಷಿಕ ಪರೀಕ್ಷೆ** **ಅಂಕ:-೮೦**

**ತರಗತಿ:- 10ನೇ ತರಗತಿ** **ಸಮಯ:-೩.೦೦ ಗಂಟೆ**

---

**I. ಈ ಕೆಳಗಿನ ಬಹುಆಯ್ಕೆ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ: 10x1=10**

1. **ಚಿತ್ರ ಕಲಾವಿದನೊಬ್ಬ ಆತ್ಮ ಸಂತೋಷಕ್ಕಾಗಿ ಚಿತ್ರ ಬಿಡಿಸುವ ಕಾರ್ಯದಲ್ಲಿ ತೊಡಗಿರುವುದು**
   ಎ) ಕೂಲಿ ಸಹಿತ ದುಡಿಮೆ ಬಿ) ಕೂಲಿ ರಹಿತ ದುಡಿಮೆ ಸಿ) ಶ್ರಮ ವಿಭಜನೆ ಡಿ) ದುಡಿಮೆಯ ತಾರತಮ್ಯ
2. **ಬ್ರಿಟಿಷ್ ಬರಹಗಳು ಭಾರತೀಯ ಸ್ವಾತಂತ್ರ್ಯ ಹೋರಾಟವನ್ನು -------- ಎಂದು ಬಿಂಬಿಸಿದವು.**
   ಎ) ಸ್ವಾತಂತ್ರ್ಯ ಸಂಗ್ರಾಮ ಬಿ) ದಂಗೆಗಳು ಸಿ) ಪಿತೂರಿಗಳು ಡಿ) ಯುದ್ಧಗಳು
3. **ಈ ಕೆಳಗಿನವುಗಳಲ್ಲಿ ಸರಿಯಾದ ಹೊಂದಿಕೆಯನ್ನು ಗುರುತಿಸಿರಿ.**

   ಎ) 1–ನಾಗಾರ್ಜುನ ಸಾಗರ,2–ಭಾಕ್ರನಂಗಲ್,3–ಕೋಸಿ ಬಿ) 1–ಭಾಕ್ರನಂಗಲ್,2–ಕೋಸಿ,3–ನಾಗಾರ್ಜುನ ಸಾಗರ
   ಸಿ) 1–ಕೋಸಿ,2–ನಾಗಾರ್ಜುನಸಾಗರ, 3–ಭಾಕ್ರನಂಗಲ್ ಡಿ) 1–ನಾಗಾರ್ಜುನ ಸಾಗರ,2–ಕೋಸಿ,3–ಭಾಕ್ರನಂಗಲ್
4. **1935ರ ಭಾರತ ಸರ್ಕಾರ ಕಾಯ್ದೆಯು ಒಂದು ಮುಖ್ಯ ದಾಖಲೆಯಾಗಿದೆ. ಏಕೆಂದರೆ**
   ಎ)ಪ್ರಾಂತ್ಯಗಳಲ್ಲಿ ದ್ವಿದಳ ಸರ್ಕಾರವನ್ನ ಜಾರಿಗೊಳಿಸಿತು ಸಿ)ಮತೀಯ ಆಧಾರದ ಚುನಾವಣೆ ಕ್ಷೇತ್ರಗಳ ಸ್ಥಾಪನೆ
   ಬಿ)ನಿಯಂತ್ರಣ ಮಂಡಳಿ ನೇಮಿಸಿತು ಡಿ)ಅಖಿಲ ಭಾರತ ಸಂಯುಕ್ತ ವ್ಯವಸ್ಥೆಗೆ ಅವಕಾಶ
5. **ಫ್ರೆಂಚರನ್ನು ವಾಂಡಿವಾಷ್ ಕದನದಲ್ಲಿ ಸೋಲಿಸಿದ ಇಂಗ್ಲಿಷ್ ಸೇನಾಧಿಕಾರಿ**
   ಎ) ಡೂಪ್ಲೆ ಬಿ) ಐರ್‌ಕೂಟ್ ಸಿ) ವಾಸ್ಕೋಡಿಗಾಮ ಡಿ) ರಾಬರ್ಟ್ ಕ್ಲೈವ್
6. **ಭಾರತವು ಅಲಿಪ್ತ ವಿದೇಶಾಂಗ ನೀತಿಯನ್ನು ಅನುಸರಿಸಿತು. ಅರ್ಥವೆಂದರೇ ಭಾರತವು**
   ಎ)ಅಮೇರಿಕಾ ಬಣವನ್ನು ಸೇರಿತು ಸಿ)ಎರಡೂ ಬಣಗಳಿಂದ ಸಮಾನ ಅಂತರ ಕಾಪಾಡಿತು
   ಬಿ)ರಷ್ಯಾ ಬಣವನ್ನು ಸೇರಿತು ಡಿ)ವಿಸ್ತರಣಾವಾದಿ ನೀತಿಯನ್ನು ಅನುಸರಿಸಿತು
7. **ರಾಮಣ್ಣನು ಭವಿಷ್ಯದಲ್ಲಿ ಗೃಹ ನಿರ್ಮಾಣಕ್ಕಾಗಿ ಹಣ ಉಳಿತಾಯ ಮಾಡಲು ಬಯಸಿದ್ದು, ಅವನು ಬ್ಯಾಂಕಿನಲ್ಲಿ ಯಾವ ಖಾತೆಯನ್ನು ತೆರೆಯುವುದು ಸೂಕ್ತ.**
   ಎ) ಉಳಿತಾಯ ಖಾತೆ ಬಿ) ಚಾಲ್ತಿ ಖಾತೆ ಸಿ) ಆವರ್ತ ಠೇವಣಿ ಖಾತೆ ಡಿ) ನಿಶ್ಚಿತ ಠೇವಣಿ ಖಾತೆ
8. **ದೇಶದಲ್ಲಿಯೇ ಅತಿ ಹೆಚ್ಚು ಉಷ್ಣಾಂಶ ದಾಖಲಾಗುವ ಪ್ರದೇಶ**
   ಎ)ರೂಯ್ಲಿ ಬಿ)ಗಂಗಾ ನಗರ ಸಿ)ಮಾಸಿನ್ ರಾಮ್ ಡಿ)ಆಗುಂಬೆ
9. **ಸಂವಿಧಾನದ ಯಾವ ವಿಧಿಯನ್ವಯ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಪರಿಗಣಿಸಲಾಗಿದೆ**
   ಎ) 21ನೇ ವಿಧಿ ಬಿ) 22ನೇ ವಿಧಿ ಸಿ) 23ನೇ ವಿಧಿ ಡಿ) 24ನೇ ವಿಧಿ
10. **ಭಾರತದ ಅರ್ಥವ್ಯವಸ್ಥೆಯ ಮೂಲ ಸಮಸ್ಯೆ**
    ಎ) ಮೂಢನಂಬಿಕೆ ಬಿ) ನಿರುದ್ಯೋಗ ಸಿ) ಬಡತನ ಡಿ) ಲಿಂಗ ತಾರತಮ್ಯ

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿರಿ: 14x1=14**

11. ಕರ್ನಾಟಕದ ಎರಡು ರಾಷ್ಟ್ರೀಯ ಉದ್ಯಾನವನಗಳನ್ನು ಹೆಸರಿಸಿ.
12. ಕೋಮುವಾದ ದೇಶದ ಏಕತೆ ಮತ್ತು ಸಮಗ್ರತೆಗೆ ಅಪಾಯಕಾರಿ ಹೇಗೆ?
13. ಜನಪದ ಚರಿತ್ರೆಯಲ್ಲಿ ದಾಖಲೆಗಳೇ ಮುಖ್ಯವಲ್ಲ ಏಕೆ?
14. ವಿಮೆಯನ್ನು ಅರ್ಥೈಸಿರಿ.
15. ಭಾರತದ ಆರ್ಥಿಕ 'ಯೋಜನೆಯ ಪಿತ' ಎಂದು ಯಾರನ್ನು ಕರೆಯಲಾಗಿದೆ?
16. ಅಲ್ಯುಮಿನಿಯಂನ್ನು 20ನೇ ಶತಮಾನದ ಅದ್ಭುತ ಲೋಹ ಎಂದು ಕರೆಯುತ್ತಾರೆ. ಏಕೆ?
17. ಭೂಅನ್ವೇಷಣೆಯಲ್ಲಿ ಮೇಲುಗೈ ಸಾಧಿಸಿದ ದೇಶಗಳನ್ನು ಹೆಸರಿಸಿ.

18. ಸಾಮಾಜಿಕ ಸ್ತರ ವಿನ್ಯಾಸ ಎಂದರೇನು?

19. ಡೆಕ್ಕನ್ ಟ್ರ್ಯಾಪ್ ಪ್ರದೇಶದಲ್ಲಿ ಕಂಡು ಬರುವ ಮಣ್ಣು ಯಾವುದು?

20. ದಕ್ಷಿಣ ಭಾರತದ ಅತ್ಯುನ್ನತ ಶಿಖರ ಯಾವುದು?

21. ಭಾರತದ ಇತಿಹಾಸದಲ್ಲಿ 19ನೇ ಶತಮಾನವನ್ನು ಏನೆಂದು ಕರೆಯಲಾಗಿದೆ?

22. ಜನಪದ ಚರಿತ್ರೆ ಎಂದರೇನು?

23. ಇತ್ತೀಚಿಗೆ ಅನಾಭಿವೃದ್ಧಿ ರಾಷ್ಟ್ರಗಳನ್ನು ಅಭಿವೃದ್ಧ ಶೀಲ ರಾಷ್ಟ್ರಗಳೆಂದು ಕರೆಯಲಾಗುತ್ತಿದೆ. ಏಕೆ?

24. ಜೇಡ್ ಬೇಸಾಯ ಎಂದರೇನು?

**III. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ: 15x2=30**

25. ಭಾರತದ ಪ್ರಾಕೃತಿಕ ವಿಭಾಗಗಳನ್ನು ತಿಳಿಸಿ.

26. ಒಂದು ದೇಶದ ಶೈಕ್ಷಣಿಕ ಸಾಧನೆಯನ್ನು ಹೇಗೆ ಅಳೆಯುತ್ತಾರೆ?

27. ಲಾಭಕೋರತನದ ದುಷ್ಪರಿಣಾಮಗಳನ್ನು ವಿವರಿಸಿ.

28. ರೈತರ ಮನೋಧೋರಣೆಯ ಒಂದು ಪ್ರದೇಶದ ಬೆಳೆಯ ಮಾದರಿಯನ್ನು ನಿರ್ಧರಿಸುತ್ತದೆ. ಹೇಗೆ? ಉದಾರಣೆಯೊಂದಿಗೆ ವಿವರಿಸಿ.

29. ಪಶ್ಚಿಮ ಯೂರೋಪಿಯನ್ ದೇಶಗಳಿಗೆ ಭಾರತಕ್ಕೆ ಒಂದು ಪರ್ಯಾಯ ವ್ಯಾಪಾರ ಮಾರ್ಗವನ್ನು ಹುಡುಕುವ ಅನಿವಾರ್ಯವಿತ್ತು. ಈ ಹೇಳಿಕೆಯನ್ನು ಸಮರ್ಥಿಸಿ

30. ಮ್ಯಾಂಗ್ರೋವ್ ಅರಣ್ಯಗಳು ಮತ್ತು ಮಾನ್ಸೂನ್ ಅರಣ್ಯಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

31. ಮಂಬೈ ಪ್ರಾಂತ್ಯದ ಆಳ್ವಿಕೆಗೆ ಒಳಪಟ್ಟಿದ್ದ ಕನ್ನಡ ಮಾತನಾಡುವ ಪ್ರದೇಶಗಳಾವುವು?

32. ಭಾರತವನ್ನು ಒಂದು ಉಪಖಂಡ ಎಂದು ಕರೆಯಲು ಕಾರಣವೇನು?

33. ಶ್ರೀರಂಗಪಟ್ಟಣ ಒಪ್ಪಂದದ ತರುವಾಯ ಬ್ರಿಟಿಷರ ವಿರುದ್ಧ ಹೋರಾಡಲು ಟಿಪ್ಪು ನಡೆಸಿದ ಯುದ್ಧ ಸಿದ್ಧತೆಯನ್ನು ವಿವರಿಸಿ. <u>ಅಥವಾ</u> ಕೊಡಗಿನ ರೈತ ದಂಗೆಯನ್ನು ವಿವರಿಸಿ.

34. ನಿರುದ್ಯೋಗದ ಪ್ರಕಾರಗಳನ್ನು ಹೆಸರಿಸಿ.

35. ದಯಾನಂದ ಸರಸ್ವತಿಯವರ 'ವೇದಗಳಿಗೆ ಹಿಂದಿರುಗಿ' ಎನ್ನುವ ಘೋಷಣೆಯನ್ನು ವಿಶ್ಲೇಷಿಸಿ.

36. ಮಣ್ಣಿನ ಸವೆತವನ್ನು ನೀವು ಹೇಗೆ ತಡೆಗಟ್ಟಬಹುದು?

37. ಅಂಚೆಕಛೇರಿಗಳು ಹಣಕಾಸಿನ ಕಾರ್ಯಗಳನ್ನು ಬರೆಯಿರಿ.

38. ವಿವಿಧೋದ್ದೇಶ ನದಿ ಕಣಿವೆ ಯೋಜನೆಯ ಉದ್ದೇಶಗಳಾವುವು?

39. ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?

**IV. ಈ ಕೆಳಗಿನ ಪ್ರಶ್ನೆಗಳಿಗೆ ಐದು ಆರು ವಾಕ್ಯಗಳಲ್ಲಿ ಉತ್ತರಿಸಿರಿ: 6x3=18**

40. 1919ರ ಭಾರತ ಸರ್ಕಾರ ಶಾಸನದ ಪ್ರಮುಖ ಅಂಶಗಳನ್ನು ತಿಳಿಸಿ <u>ಅಥವಾ</u> ಪ್ರಾರ್ಥನಾ ಸಮಾಜದ ಸುಧಾರಣೆಗಳನ್ನು ತಿಳಿಸಿರಿ

41. ಸಾಕ್ಷರತೆಯನ್ನು ವೃದ್ಧಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು? <u>ಅಥವಾ</u> ಭಾರತದ ವಿದೇಶಾಂಗ ನೀತಿಯನ್ನು ನಿರ್ಧರಿಸುವ ಅಂಶಗಳು ಯಾವುವು?

42. ಅಸ್ಪೃಶ್ಯತೆ ನಿವಾರಣೆಯ ಸಂವಿಧಾನಾತ್ಮಕ &ಶಾಸನಾತ್ಮಕ ಕ್ರಮಗಳಾವುವು? <u>ಅಥವಾ</u> ದುಡಿಮೆಯಲ್ಲಿನ ತಾರತಮ್ಯತೆಯ ಸ್ವರೂಪವನ್ನು ವಿವರಿಸಿ.

43. ಭೂ ಬಳಕೆಯ ಮೇಲೆ ಆರ್ಥಿಕ ಅಂಶಗಳು ಪ್ರಭಾವ ಬೀರುತ್ತವೆ, ಹೇಗೆ? <u>ಅಥವಾ</u> ಶಕ್ತಿ ಸಂಪನ್ಮೂಲಗಳ ಕೊರತೆಯನ್ನು ನಿವಾರಿಸಲು ನಿಮ್ಮದೇ ಆದ ಸಲಹೆಗಳನ್ನು ನೀಡಿ.

44. ಅನಭಿವೃದ್ಧಿ ದೇಶಗಳ ಲಕ್ಷಣಗಳಾವುವು? <u>ಅಥವಾ</u> ಭಾರತದ ಪಂಚ ವಾರ್ಷಿಕ ಯೋಜನೆಗಳ ಸಾಧನೆಗಳನ್ನು ವಿವರಿಸಿ.

45. ಉಳಿತಾಯ ಖಾತೆ ಹಾಗೂ ಚಾಲ್ತಿ ಖಾತೆಗಳಿಗಿರು ವ್ಯತ್ಯಾಸಗಳೇನು? <u>ಅಥವಾ</u> ಜೀವ ವಿಮೆ ಮತ್ತು ಸಾಮಾನ್ಯ ವಿಮೆಯ ನಡುವಿನ ವ್ಯತ್ಯಾಸಗಳನ್ನು ಪಟ್ಟಿ ಮಾಡಿ.

**V. ಈ ಕೆಳಗಿನ ಪ್ರಶ್ನೆಗೆ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ: 1x4=4**

46. 1857ರ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣವಾದ ರಾಜಕೀಯ ಮತ್ತು ಆರ್ಥಿಕ ಅಂಶಗಳನ್ನು ವಿವರಿಸಿ.

**VI. 47.** ಭಾರತದ ನಕ್ಷೆಯನ್ನು ಬರೆದು ಈ ಕೆಳಗಿನವುಗಳನ್ನು ಗುರುತಿಸಿ **1+3=4**

ಎ) $82\frac{1}{2}^{0}$ ಪೂರ್ವ ರೇಖಾಂಶ ಬಿ) ಪಶ್ಚಿಮ ಘಟ್ಟಗಳು ಸಿ) ಕೈಗಾ

# ಪಿ.ಎ.ಎಂ ಸರ್ಕಾರಿ ಪ್ರೌಢಶಾಲೆ ಬನ್ನಿಕಲ್ಲು, ಹ ಬೊ ಹಳ್ಳಿ(ತಾ), ಬಳ್ಳಾರಿ(ಜಿ)

ಸಂಕಲನಾತ್ಮಕ ಮೌಲ್ಯಮಾಪನ–1

ಅರ್ಧ ವಾರ್ಷಿಕ ಪರೀಕ್ಷೆಯ ಪ್ರಶ್ನೆ ಪತ್ರಿಕೆಯ ನೀಲನಕ್ಷೆ

**ತರಗತಿ: 10ನೇ ತರಗತಿ** **ವಿಷಯ: ಸಮಾಜ ವಿಜ್ಞಾನ**

**ಸಾಮರ್ಥ್ಯವಾರು ಅಂಕ ಹಂಚಿಕೆ**

| | ಸಾಮರ್ಥ್ಯ | ಅಂಕ | ಶೇಕಡವಾರು |
|---|---|---|---|
| 01 | ಜ್ಞಾನ | 24 | 30% |
| 02 | ತಿಳುವಳಿಕೆ | 32 | 40% |
| 03 | ಅನ್ವಯ | 20 | 25% |
| 04 | ಕೌಶಲ | 04 | 5% |

**ಕ್ಲಿಷ್ಟಾನುಸಾರ ಅಂಕ ಹಂಚಿಕೆ**

| | | ಅಂಕಗಳು | ಶೇಕಡವಾರು |
|---|---|---|---|
| 01 | ಸುಲಭ | 24 | 30% |
| 02 | ಸಾಮಾನ್ಯ | 36 | 45% |
| 03 | ಕಠಿಣ | 20 | 25% |

**ಪ್ರಶ್ನಾನುಸಾರ ಅಂಕ ಹಂಚಿಕೆ**

| | ಪ್ರಶ್ನೆಗಳು | ಪ್ರಶ್ನೆಗಳ ಸಂಖ್ಯೆ | ಅಂಕಗಳು |
|---|---|---|---|
| 01 | ಬಹುಆಯ್ಕೆ ಪ್ರಶ್ನೆಗಳು | 10 | 10 |
| 02 | ಕಿರು ಉತ್ತರದ ಪ್ರಶ್ನೆಗಳು | 14 | 14 |
| 03 | ಸಂಕ್ಷಿಪ್ತ ಉತ್ತರದ ಪ್ರಶ್ನೆಗಳು | 15 | 30 |
| 04 | ದೀರ್ಘ ಉತ್ತರದ ಪ್ರಶ್ನೆಗಳು–1 | 06 | 18 |
| 05 | ದೀರ್ಘ ಉತ್ತರದ ಪ್ರಶ್ನೆಗಳು–2 | 01 | 04 |
| 06 | ನಕ್ಷೆ | 01 | 04 |
| | ಒಟ್ಟು | 47 | 80 |

**ವಿಷಯಾನುಸಾರ ಅಂಕ ಹಂಚಿಕೆ**

| | ಪ್ರಶ್ನೆಗಳ ಮಾದರಿಗಳು | ಬ.ಪ್ರ | ಕಿ.ಉ.ಪ್ರ | ಸ.ಉ.ಪ್ರ | ದೀ.ಉ.ಪ್ರ1 | ದೀ.ಉ.ಪ್ರ2 | ನಕ್ಷೆ | ಪ್ರಶ್ನೆಗಳು | ಅಂಕಗಳು |
|---|---|---|---|---|---|---|---|---|---|
| 01 | ಇತಿಹಾಸ | 03 | 04 | 04 | 01 | 01 | --- | 13 | 22 |
| 02 | ರಾಜ್ಯಶಾಸ್ತ್ರ | 02 | 01 | 01 | 01 | --- | --- | 05 | 08 |
| 03 | ಸಮಾಜಶಾಸ್ತ್ರ | 01 | 01 | 01 | 01 | --- | --- | 04 | 07 |
| 04 | ಭೂಗೋಳಶಾಸ್ತ್ರ | 02 | 05 | 07 | 01 | --- | 01 | 16 | 28 |
| 05 | ಅರ್ಥಶಾಸ್ತ್ರ | 01 | 02 | 01 | 01 | --- | --- | 05 | 08 |
| 06 | ವ್ಯವಹಾರ ಅಧ್ಯಯನ | 01 | 01 | 01 | 01 | --- | --- | 04 | 07 |
| | ಒಟ್ಟು | 10 | 14 | 15 | 06 | 01 | 01 | 47 | 80 |

# ಘಟಕವಾರು ಅಂಕ ಹಂಚಿಕೆ

| ಕ್ರ ಸಂ | ಘಟಕಗಳು | ಜ್ಞಾನ | | | | | ತಿಳುವಳಿಕೆ | | | | | ಅನ್ವಯ | | | | | ಕೌಶಲ್ಯ | | | | | ಒಟ್ಟು ಪ್ರಶ್ನೆ | ಒಟ್ಟು ಅಂಕ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | 01 | 02 | 03 | 04 | 05 | 01 | 02 | 03 | 04 | 05 | 01 | 02 | 03 | 04 | 05 | 01 | 02 | 03 | 04 | 05 | | |
| 1 | ಭಾರತಕ್ಕೆ ಯುರೋಪಿಯನ್ನರ ಆಗಮನ | 1{1} | | | | | | | | | | | | 1{2} | | | | | | | | 02 | 03 |
| 2 | ವಸಾಹತು ಆಳ್ವಿಕೆಯಲ್ಲಿ ಕನ್ನಡ ಮಾತನಾಡುವ ಪ್ರದೇಶಗಳು | | | 1{2} | | | | | 1{2} | | | | | | | | | | | | | 02 | 04 |
| 3 | ಜನಪದ ಚರಿತ್ರೆ | 1{1} | | | | | | 1{1} | | | | | 1{1} | | | | | | | | | 03 | 03 |
| 4 | ಬ್ರಿಟಿಷ್ ಆಡಳಿತದ ಬುನಾದಿ ಹಾಗೂ ಅದರ ಪರಿಣಾಮಗಳು | | 1{1} | | | | | | | 1{3} | | 1{1} | | | | | | | | | | 05 | 08 |
| 5 | ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು | | 1{1} | | | | | | | | | | | 1{2} | | | | | | | | | |
| 6 | ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ | | | | | | | | | | 1{4} | | | | | | | | | | | 01 | 04 |
| 7 | ಭಾರತದ ಸಮಸ್ಯೆಗಳು – ಅವುಗಳ ಪರಿಹಾರೋಪಾಯಗಳು | 1{1} | | | 1{3} | | | | 1{2} | | | | 1{1} | | | | | | | | | 05 | 08 |
| 8 | ಭಾರತದ ವಿದೇಶಾಂಗ ನೀತಿ | | | | | | 1{1} | | | | | | | | | | | | | | | | |
| 9 | ಸಾಮಾಜಿಕ ಸ್ತರ ವಿನ್ಯಾಸ | | | | | | | 1{1} | | 1{3} | | | | | | | | | | | | 04 | 07 |
| 10 | ದುಡಿಮೆ ಮತ್ತು ಆರ್ಥಿಕ ಜೀವನ | | | 1{2} | | | 1{1} | | | | | | | | | | | | | | | | |
| 11 | ಭಾರತ ನಮ್ಮ ಮಾತೃಭೂಮಿ | | | | | | | | 1{2} | | | | | | | | 1* | | | | | 02 | 03 |
| 12 | ಭಾರತದ ಪ್ರಾಕೃತಿಕ ಲಕ್ಷಣಗಳು | | 1{1} | 1{2} | | | | | | | | | | | | | 1* | | | | | 02 | 04 |
| 13 | ಭಾರತದ ಮಾನ್ಸೂನ್ ವಾಯುಗುಣ | 1{1} | | 1{2} | | | | | | | | | | | | | | | | | | 02 | 03 |
| 14 | ಭಾರತದ ಮಣ್ಣುಗಳು | | 1{1} | | | | | | | | | | | 1{2} | | | | | | | | 02 | 03 |
| 15 | ಭಾರತದ ಅರಣ್ಯಗಳು | | 1{1} | | | | | | 1{2} | | | | | | | | | | | | | 02 | 03 |
| 16 | ಜಲ ಸಂಪನ್ಮೂಲಗಳು | | | 1{2} | | | 1{1} | | | | | | | | | | 1* | | | | | 02 | 04 |
| 17 | ಭಾರತದ ಭೂ ಬಳಕೆ ಹಾಗೂ ವ್ಯವಸಾಯ | | | | | | | 1{1} | | | | | | 1{2} | 1{3} | | | | | | | 04 | 08 |
| 18 | ಖನಿಜ ಮತ್ತು ಶಕ್ತಿ ಸಂಪನ್ಮೂಲಗಳು | | | | | | | | | | | | 1{1} | | | | 1* | | | | | | |
| 19 | ಅಭಿವೃದ್ಧಿ | | | | | | | | 1{2} | 1{3} | | | 1{1} | | | | | | | | | 05 | 08 |
| 20 | ಅರ್ಥವ್ಯವಸ್ಥೆ ಮತ್ತು ಸರ್ಕಾರ | 1{1} | 1{1} | | | | | | | | | | | | | | | | | | | | |
| 21 | ಬ್ಯಾಂಕು ವ್ಯವಹಾರಗಳು | | | | | | | | 1{2} | | | 1{1} | | | 1{3} | | | | | | | 04 | 07 |
| 22 | ವಿಮೆ | | | | | | | 1{1} | | | | | | | | | | | | | | | |
| | | 5{5} | 6{6} | 5{10} | 1{3} | | 3{3} | 4{4} | 6{12} | 3{9} | 1{4} | 2{2} | 4{4} | 4{8} | 2{6} | | 1{4} | | | | | 47 | 80 |

# ಪ್ರಶ್ನೆ ಪತ್ರಿಕೆ ವಿಶ್ಲೇಷಣೆ

| ಪ್ರಶ್ನೆ ಸಂಖ್ಯೆ | ಘಟಕ | ಉದ್ದೇಶ | ನಿರೀಕ್ಷಿತ ಫಲ | ಪ್ರಶ್ನೆ ವಿಧ | ಅಂಕ | ಕಾಲ | ಪ್ರಶ್ನೆಯ ಕ್ಲಿಷ್ಟತೆ |
|---|---|---|---|---|---|---|---|
| 1 | ದುಡಿಮೆ ಮತ್ತು ಆರ್ಥಿಕ ಜೀವನ | ತಿಳುವಳಿಕೆ | ಅರ್ಥೈಸುವನು | ಬಹುಆಯ್ಕೆ | 01 | 2ನಿ | ಸಾಮಾನ್ಯ |
| 2 | ಜನಪದ ಚರಿತ್ರೆ | ಜ್ಞಾನ | ಸ್ಮರಿಸುವನು | ಬಹುಆಯ್ಕೆ | 01 | 2ನಿ | ಸುಲಭ |
| 3 | ಜಲ ಸಂಪನ್ಮೂಲಗಳು | ತಿಳುವಳಿಕೆ | ಹೋಲಿಸಿ ಗುರುತಿಸುವನು | ಬಹುಆಯ್ಕೆ | 01 | 2ನಿ | ಸಾಮಾನ್ಯ |
| 4 | ಬ್ರಿಟಿಷ್ ಆಡಳಿತದ ಬುನಾದಿ ಹಾಗೂ ಅದರ ಪರಿಣಾಮಗಳು | ಅನ್ವಯ | ಕಾರಣ ಕೊಡುವನು | ಬಹುಆಯ್ಕೆ | 01 | 2ನಿ | ಸಾಮಾನ್ಯ |
| 5 | ಭಾರತಕ್ಕೆ ಯುರೋಪಿಯನ್ನರ ಆಗಮನ | ಜ್ಞಾನ | ಸ್ಮರಿಸುವನು | ಬಹುಆಯ್ಕೆ | 01 | 2ನಿ | ಸುಲಭ |
| 6 | ಭಾರತದ ವಿದೇಶಾಂಗ ನೀತಿ | ತಿಳುವಳಿಕೆ | ಅರ್ಥೈಸುವನು | ಬಹುಆಯ್ಕೆ | 01 | 2ನಿ | ಕಠಿಣ |
| 7 | ಬ್ಯಾಂಕು ವ್ಯವಹಾರಗಳು | ಅನ್ವಯ | ಊಹಿಸುವನು | ಬಹುಆಯ್ಕೆ | 01 | 2ನಿ | ಕಠಿಣ |
| 8 | ಭಾರತದ ಮಾನ್ಸೂನ್ ವಾಯುಗುಣ | ಜ್ಞಾನ | ಸ್ಮರಿಸುವನು | ಬಹುಆಯ್ಕೆ | 01 | 2ನಿ | ಸುಲಭ |
| 9 | ಭಾರತದ ಸಮಸ್ಯೆಗಳು – ಅವುಗಳ ಪರಿಹಾರೋಪಾಯಗಳು | ಜ್ಞಾನ | ಸ್ಮರಿಸುವನು | ಬಹುಆಯ್ಕೆ | 01 | 2ನಿ | ಸುಲಭ |
| 10 | ಅರ್ಥವ್ಯವಸ್ಥೆ ಮತ್ತು ಸರ್ಕಾರ | ಜ್ಞಾನ | ಸ್ಮರಿಸುವನು | ಬಹುಆಯ್ಕೆ | 01 | 2ನಿ | ಸಾಮಾನ್ಯ |
| 11 | ಭಾರತದ ಅರಣ್ಯಗಳು | ಜ್ಞಾನ | ಸ್ಮರಿಸುವನು | ಕಿರುಉತ್ತರ | 01 | 2ನಿ | ಸುಲಭ |
| 12 | ಭಾರತದ ಸಮಸ್ಯೆಗಳು – ಅವುಗಳ ಪರಿಹಾರೋಪಾಯಗಳು | ಅನ್ವಯ | ಊಹಿಸುವನು | ಕಿರುಉತ್ತರ | 01 | 2ನಿ | ಕಠಿಣ |
| 13 | ಜನಪದ ಚರಿತ್ರೆ | ಅನ್ವಯ | ಕಾರಣ ಕೊಡುವನು | ಕಿರುಉತ್ತರ | 01 | 2ನಿ | ಸಾಮಾನ್ಯ |
| 14 | ವಿಮೆ | ತಿಳುವಳಿಕೆ | ಅರ್ಥೈಸುವನು | ಕಿರುಉತ್ತರ | 01 | 2ನಿ | ಸಾಮಾನ್ಯ |
| 15 | ಅರ್ಥವ್ಯವಸ್ಥೆ ಮತ್ತು ಸರ್ಕಾರ | ಜ್ಞಾನ | ಸ್ಮರಿಸುವನು | ಕಿರುಉತ್ತರ | 01 | 2ನಿ | ಸುಲಭ |
| 16 | ಖನಿಜ ಮತ್ತು ಶಕ್ತಿ ಸಂಪನ್ಮೂಲಗಳು | ಅನ್ವಯ | ಕಾರಣ ಕೊಡುವನು | ಕಿರುಉತ್ತರ | 01 | 2ನಿ | ಸಾಮಾನ್ಯ |
| 17 | ಬ್ರಿಟಿಷ್ ಆಡಳಿತದ ಬುನಾದಿ ಹಾಗೂ ಅದರ ಪರಿಣಾಮಗಳು | ಜ್ಞಾನ | ಸ್ಮರಿಸುವನು | ಕಿರುಉತ್ತರ | 01 | 2ನಿ | ಸಾಮಾನ್ಯ |
| 18 | ಸಾಮಾಜಿಕ ಸ್ತರ ವಿನ್ಯಾಸ | ತಿಳುವಳಿಕೆ | ಅರ್ಥೈಸುವನು | ಕಿರುಉತ್ತರ | 01 | 2ನಿ | ಸುಲಭ |
| 19 | ಭಾರತದ ಮಣ್ಣುಗಳು | ಜ್ಞಾನ | ಸ್ಮರಿಸುವನು | ಕಿರುಉತ್ತರ | 01 | 2ನಿ | ಸುಲಭ |
| 20 | ಭಾರತದ ಪ್ರಾಕೃತಿಕ ಲಕ್ಷಣಗಳು | ಜ್ಞಾನ | ಸ್ಮರಿಸುವನು | ಕಿರುಉತ್ತರ | 01 | 2ನಿ | ಸುಲಭ |
| 21 | ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು | ಜ್ಞಾನ | ಹೆಸರಿಸುವನು | ಕಿರುಉತ್ತರ | 01 | 2ನಿ | ಸಾಮಾನ್ಯ |
| 22 | ಜನಪದ ಚರಿತ್ರೆ | ತಿಳುವಳಿಕೆ | ಅರ್ಥೈಸುವನು | ಕಿರುಉತ್ತರ | 01 | 2ನಿ | ಸುಲಭ |
| 23 | ಅಭಿವೃದ್ಧಿ | ಅನ್ವಯ | ಕಾರಣ ಕೊಡುವನು | ಕಿರುಉತ್ತರ | 01 | 2ನಿ | ಕಠಿಣ |
| 24 | ಭಾರತದ ಭೂ ಬಳಕೆ ಹಾಗೂ ವ್ಯವಸಾಯ | ತಿಳುವಳಿಕೆ | ಅರ್ಥೈಸುವನು | ಕಿರುಉತ್ತರ | 01 | 2ನಿ | ಸುಲಭ |
| 25 | ಭಾರತದ ಪ್ರಾಕೃತಿಕ ಲಕ್ಷಣಗಳು | ಜ್ಞಾನ | ಸ್ಮರಿಸುವನು | ಸಂಕ್ಷಿಪ್ತ ಉತ್ತರ | 02 | 4ನಿ | ಸುಲಭ |
| 26 | ಅಭಿವೃದ್ಧಿ | ತಿಳುವಳಿಕೆ | ವಿವರಿಸುವನು | ಸಂಕ್ಷಿಪ್ತ ಉತ್ತರ | 02 | 4ನಿ | ಕಠಿಣ |
| 27 | ಭಾರತದ ಸಮಸ್ಯೆಗಳು – ಅವುಗಳ ಪರಿಹಾರೋಪಾಯಗಳು | ತಿಳುವಳಿಕೆ | ವಿವರಿಸುವನು | ಸಂಕ್ಷಿಪ್ತ ಉತ್ತರ | 02 | 4ನಿ | ಕಠಿಣ |
| 28 | ಭಾರತದ ಭೂ ಬಳಕೆ ಹಾಗೂ ವ್ಯವಸಾಯ | ಅನ್ವಯ | ಉದಾಹರಿಸುವನು | ಸಂಕ್ಷಿಪ್ತ ಉತ್ತರ | 02 | 4ನಿ | ಕಠಿಣ |
| 29 | ಭಾರತಕ್ಕೆ ಯುರೋಪಿಯನ್ನರ ಆಗಮನ | ಅನ್ವಯ | ಸಮರ್ಥಿಸುವನು | ಸಂಕ್ಷಿಪ್ತ ಉತ್ತರ | 02 | 4ನಿ | ಕಠಿಣ |
| 30 | ಭಾರತದ ಅರಣ್ಯಗಳು | ತಿಳುವಳಿಕೆ | ವ್ಯತ್ಯಾಸ ತಿಳಿಸುವನು | ಸಂಕ್ಷಿಪ್ತ ಉತ್ತರ | 02 | 4ನಿ | ಸಾಮಾನ್ಯ |
| 31 | ವಸಾಹತು ಆಳ್ವಿಕೆಯಲ್ಲಿ ಕನ್ನಡ ಮಾತನಾಡುವ ಪ್ರದೇಶಗಳು | ಜ್ಞಾನ | ಹೆಸರಿಸುವನು | ಸಂಕ್ಷಿಪ್ತ ಉತ್ತರ | 02 | 4ನಿ | ಸಾಮಾನ್ಯ |
| 32 | ಭಾರತ ನಮ್ಮ ಮಾತೃಭೂಮಿ | ತಿಳುವಳಿಕೆ | ಕಾರಣ ನೀಡುವನು | ಸಂಕ್ಷಿಪ್ತ ಉತ್ತರ | 02 | 4ನಿ | ಸಾಮಾನ್ಯ |
| 33 | ವಸಾಹತು ಆಳ್ವಿಕೆಯಲ್ಲಿ ಕನ್ನಡ ಮಾತನಾಡುವ ಪ್ರದೇಶಗಳು | ತಿಳುವಳಿಕೆ | ವಿವರಿಸುವನು | ಸಂಕ್ಷಿಪ್ತ ಉತ್ತರ | 02 | 4ನಿ | ಸಾಮಾನ್ಯ |
| 34 | ದುಡಿಮೆ ಮತ್ತು ಆರ್ಥಿಕ ಜೀವನ | ಜ್ಞಾನ | ಹೆಸರಿಸುವನು | ಸಂಕ್ಷಿಪ್ತ ಉತ್ತರ | 02 | 4ನಿ | ಸಾಮಾನ್ಯ |

| | | | | | | | |
|---|---|---|---|---|---|---|---|
| 35 | ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು | ಅನ್ವಯ | ವಿಶ್ಲೇಷಿಸುವನು | ಸಂಕ್ಷಿಪ್ತ ಉತ್ತರ | 02 | 4ನಿ | ಕಠಿಣ |
| 36 | ಭಾರತದ ಮಣ್ಣುಗಳು | ಅನ್ವಯ | ಊಹಿಸುವನು | ಸಂಕ್ಷಿಪ್ತ ಉತ್ತರ | 02 | 4ನಿ | ಸುಲಭ |
| 37 | ಬ್ಯಾಂಕು ವ್ಯವಹಾರಗಳು | ಅನ್ವಯ | ಸಮರ್ಥಿಸುವನು | ಸಂಕ್ಷಿಪ್ತ ಉತ್ತರ | 02 | 4ನಿ | ಸಾಮಾನ್ಯ |
| 38 | ಜಲ ಸಂಪನ್ಮೂಲಗಳು | ಜ್ಞಾನ | ಸ್ಮರಿಸುವನು | ಸಂಕ್ಷಿಪ್ತ ಉತ್ತರ | 02 | 4ನಿ | ಸಾಮಾನ್ಯ |
| 39 | ಭಾರತದ ಮಾನ್ಸೂನ್ ವಾಯುಗುಣ | ಜ್ಞಾನ | ಸ್ಮರಿಸುವನು | ಸಂಕ್ಷಿಪ್ತ ಉತ್ತರ | 02 | 4ನಿ | ಸುಲಭ |
| 40 | ಅಭಿವೃದ್ಧಿ<br>ಅರ್ಥವ್ಯವಸ್ಥೆ ಮತ್ತು ಸರ್ಕಾರ | ಜ್ಞಾನ | ಸ್ಮರಿಸುವನು | ದೀರ್ಘ ಉತ್ತರ1 | 03 | 6ನಿ | ಸಾಮಾನ್ಯ |
| 41 | ಭಾರತದ ಸಮಸ್ಯೆಗಳು – ಅವುಗಳ ಪರಿಹಾರೋಪಾಯಗಳು<br>ಭಾರತದ ವಿದೇಶಾಂಗ ನೀತಿ | ತಿಳುವಳಿಕೆ | ವಿವರಿಸುವನು | ದೀರ್ಘ ಉತ್ತರ1 | 03 | 6ನಿ | ಸಾಮಾನ್ಯ |
| 42 | ಸಾಮಾಜಿಕ ಸ್ತರ ವಿನ್ಯಾಸ<br>ದುಡಿಮೆ ಮತ್ತು ಆರ್ಥಿಕ ಜೀವನ | ತಿಳುವಳಿಕೆ | ವಿವರಿಸುವನು | ದೀರ್ಘ ಉತ್ತರ1 | 03 | 6ನಿ | ಸುಲಭ |
| 43 | ಭಾರತದ ಭೂ ಬಳಕೆ ಹಾಗೂ ವ್ಯವಸಾಯ<br>ಖನಿಜ ಮತ್ತು ಶಕ್ತಿ ಸಂಪನ್ಮೂಲಗಳು | ಅನ್ವಯ | ತಾರ್ಕಿಕ ಚಿಂತನೆ | ದೀರ್ಘ ಉತ್ತರ1 | 03 | 7ನಿ | ಕಠಿಣ |
| 44 | ಅಭಿವೃದ್ಧಿ<br>ಅರ್ಥವ್ಯವಸ್ಥೆ ಮತ್ತು ಸರ್ಕಾರ | ತಿಳುವಳಿಕೆ | ವಿವರಿಸುವನು | ದೀರ್ಘ ಉತ್ತರ1 | 03 | 6ನಿ | ಕಠಿಣ |
| 45 | ಬ್ಯಾಂಕು ವ್ಯವಹಾರಗಳು<br>ವಿಮೆ | ಅನ್ವಯ | ವ್ಯತ್ಯಾಸ ತಿಳಿಸುವನು | ದೀರ್ಘ ಉತ್ತರ1 | 03 | 6ನಿ | ಸಾಮಾನ್ಯ |
| 46 | ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ | ತಿಳುವಳಿಕೆ | ವಿವರಿಸುವನು | ದೀರ್ಘ ಉತ್ತರ2 | 04 | 10ನಿ | ಸಾಮಾನ್ಯ |
| 47 | ಭಾರತ ನಮ್ಮ ಮಾತೃಭೂಮಿ<br>ಭಾರತದ ಪ್ರಾಕೃತಿಕ ಲಕ್ಷಣಗಳು<br>ಜಲ ಸಂಪನ್ಮೂಲಗಳು<br>ಖನಿಜ ಮತ್ತು ಶಕ್ತಿ ಸಂಪನ್ಮೂಲಗಳು | ಕೌಶಲ | ರಚಿಸುವನು & ಗುರುತಿಸುವನು | ನಕ್ಷೆ ರಚನೆ | 04 | 10ನಿ | ಸುಲಭ |
| | | | | | 80 | 165ನಿ | |


**15ನಿಮಿಷಗಳನ್ನು ಪ್ರಶ್ನೆ ಪತ್ರಿಕೆಯನ್ನು ಓದಲು ಮೀಸಲಿಡಲಾಗಿದೆ.**

# ಮಾದರಿ ಉತ್ತರ

| | |
|---|---|
| 1) | ಬಿ) ಕೂಲಿ ರಹಿತ ದುಡಿಮೆ |
| 2) | ಬಿ) ದಂಗೆಗಳು |
| 3) | ಬಿ) 1–ಭಾಕ್ರನಂಗಲ್,2–ಕೋಸಿ,3–ನಾಗಾರ್ಜುನ ಸಾಗರ |
| 4) | ಡಿ)ಅಖಿಲ ಭಾರತ ಸಂಯುಕ್ತ ವ್ಯವಸ್ಥೆಗೆ ಅವಕಾಶ |
| 5) | ಬಿ)ಐರ್ ಕೂಟ್ |
| 6) | ಸಿ)ಎರಡೂ ಬಣಗಳಿಂದ ಸಮಾನ ಅಂತರ ಕಾಪಾಡಿತು |
| 7) | ಸಿ) ಆವರ್ತ ಠೇವಣಿ ಖಾತೆ |
| 8) | ಬಿ)ಗಂಗಾ ನಗರ |
| 9) | ಎ) 21ನೇ ವಿಧಿ |
| 10) | ಸಿ) ಬಡತನ |
| 11) | ❖ ನಾಗರಹೊಳೆ ಮತ್ತು ಬಂಡೀಪುರ. |
| 12) | ❖ ಕೋಮುವಾದವು ಸಾಮಾಜಿಕವಾಗಿ ಭಿನ್ನತೆ, ಅಪನಂಬಿಕೆ ಹಾಗೂ ಭಯದ ವಾತಾವರಣವನ್ನು ಸೃಷ್ಠಿಸುವುದರ ಮೂಲಕ ದೇಶದ ಏಕತೆ ಮತ್ತು ಸಮಗ್ರತೆಗೆ ಅಪಾಯಕಾರಿಯಾಗಿದೆ. |
| 13) | ❖ ಜನಪದ ಚರಿತ್ರೆಯಲ್ಲಿ ದಾಖಲೆಗಳಿಗಿಂತ ಸಂವೇದನೆ ಮುಖ್ಯ ಪಾತ್ರವನ್ನು ವಹಿಸುತ್ತದೆ. |
| 14) | ❖ ವಿಮೆಯು ವಿಮಾ ಸಂಸ್ಥೆ ಮತ್ತು ವಿಮಾದಾರನ ಮಧ್ಯೆ ಏರ್ಪಡುವ ಒಂದು ಒಪ್ಪಂದವಾಗಿರುತ್ತದೆ. |
| 15) | ❖ ಸರ್ ಎಂ. ವಿಶ್ವೇಶ್ವರಯ್ಯ |
| 16) | ❖ ಅಲುಮಿನಿಯಂನ್ನು ವೈವಿಧ್ಯಮಯ ಉಪಯೋಗಗಳಿಗೆ ಬಳಸಲ್ಪಡುವುದರಿಂದ ಅದನ್ನು 20ನೇ ಶತಮಾನದ ಅದ್ಭುತ ಲೋಹ ಎಂದು ಕರೆಯುತ್ತಾರೆ. |
| 17) | ❖ ಇಂಗ್ಲೆಂಡ್, ಸ್ಪೇನ್ ಮತ್ತು ಪೋರ್ಚುಗಲ್. |
| 18) | ❖ ಸಾಮಾಜಿಕ ಸ್ತರ ವಿನ್ಯಾಸವೆಂದರೆ ಜನರನ್ನು ಆದಾಯ, ಶಿಕ್ಷಣ, ಜಾತಿ, ಬಣ್ಣ, ಲಿಂಗ, ಉದ್ಯೋಗ, ಬುದ್ಧಿಶಕ್ತಿ ಮೊದಲಾದವುಗಳ ಆಧಾರದ ಮೇಲೆ ಮೇಲು–ಕೀಳು ಎಂದು ವಿಂಗಡಿಸುವುದಾಗಿದೆ. |
| 19) | ❖ ಕಪ್ಪು ಮಣ್ಣು |
| 20) | ❖ ಅನೈಮುಡಿ ಶಿಖರ ದಕ್ಷಿಣ ಭಾರತದ ಅತ್ಯುನ್ನತ ಶಿಖರವಾಗಿದೆ. |
| 21) | ❖ ಭಾರತದ ಇತಿಹಾಸದಲ್ಲಿ 19ನೇ ಶತಮಾನವನ್ನು 'ಭಾರತದ ನವೋದಯ' ಕಾಲವೆಂದು ಕರೆಯಲಾಗಿದೆ. |
| 22) | ❖ ಜನಪದ ಆಕರಗಳಿಂದ ರಚನೆಯಾಗುವ ಚರಿತ್ರೆಯೇ ಜನಪದ ಚರಿತ್ರೆ. |
| 23) | ❖ ಇತ್ತೀಚೆಗೆ ಅನಾಭಿವೃದ್ಧಿ ರಾಷ್ಟ್ರಗಳು ಆರ್ಥಿಕ ಅಭಿವೃದ್ಧಿ ಕಡೆಗೆ ಸಾಗುತ್ತಿರುವುದುರಿಂದ ಅವುಗಳನ್ನು ಅಭಿವೃದ್ಧಿ ಶೀಲ ರಾಷ್ಟ್ರಗಳೆಂದು ಕರೆಯಲಾಗುತ್ತಿದೆ. |
| 24) | ❖ ಬೇಸಿಗೆ ಅವಧಿಯ ಬೇಸಾಯವನ್ನು ಜೇಡ್ ಬೇಸಾಯ ಎನ್ನುತ್ತಾರೆ. |
| 25) | ❖ ಉತ್ತರದ ಪರ್ವತಗಳು, ಉತ್ತರದ ಮಹಾ ಮೈದಾನ, ಪರ್ಯಾಯ ಪ್ರಸ್ಥಭೂಮಿ, ಕರಾವಳಿ ಮೈದಾನಗಳು |
| 26) | ❖ ದೇಶದಲ್ಲಿನ 25 ವರ್ಷಗಳ ಮೇಲ್ಪಟ್ಟ ಜನರು ಪೂರೈಸಿರುವ ಸರಾಸರಿ ಶಾಲಾ ಶಿಕ್ಷಣದ ವರ್ಷಗಳು.<br>❖ 5 ವರ್ಷದ ಮಕ್ಕಳು ತಮ್ಮ ಜೀವಿತಾವಧಿಯಲ್ಲಿ ಪಡೆಯಲಿರುವ ನಿರೀಕ್ಷಿತ ಶಾಲಾ ಶಿಕ್ಷಣದ ವರ್ಷಗಳು.<br>❖ ಈ ಮೇಲಿನ ಎರಡು ಅಂಶಗಳಿಂದ ಒಂದು ದೇಶದ ಶೈಕ್ಷಣಿಕ ಸಾಧನೆಯನ್ನು ಅಳೆಯುತ್ತಾರೆ. |
| 27) | ❖ ಆರ್ಥಿಕ ಅಸಮಾನತೆಗೆ ಕಾರಣವಾಗುತ್ತದೆ.<br>❖ ಸಮಾಜದಲ್ಲಿ ಬಡತನ ಮತ್ತಷ್ಟು ಹೆಚ್ಚಾಗುತ್ತದೆ.<br>❖ ಸಮಾಜದಲ್ಲಿ ಅಪರಾಧಗಳು ಹೆಚ್ಚಾಗುತ್ತವೆ.<br>❖ ಅನೈತಿಕ ವ್ಯಾಪಾರ ವಹಿವಾಟಿಗೆ ಪ್ರಚೋದನೆಯನ್ನು ನೀಡುತ್ತದೆ |

| | | |
|---|---|---|
| | ❖ ಹಣದುಬ್ಬರಕ್ಕೆ ಎಡೆಮಾಡಿಕೊಂಡುತ್ತದೆ | |
| **28)** | ❖ ಒಂದು ಪ್ರದೇಶದ ಬೆಳೆ ಮಾದರಿಯಲ್ಲಿ ರೈತರ ಮನೋಧೋರಣೆಯು ಪ್ರಮುಖ ಪ್ರಭಾವವನ್ನು ಬೀರುತ್ತದೆ.<br>❖ ಉದಾಹರಣೆಗೆ ಉತ್ತರ ಕರ್ನಾಟಕದಲ್ಲಿ ರೈತರು ಮೊದಲು ಜೋಳ, ಗೋಧಿಯನ್ನು ಹೆಚ್ಚಾಗಿ ಬೆಳೆಯುತ್ತಿದ್ದರು.<br>❖ ಇತ್ತೀಚಿಗೆ ಆರ್ಥಿಕ ಲಾಭ ಕೊಡುವ ಸೂರ್ಯಕಾಂತಿ ಮತ್ತು ಶೇಂಗಾ, ತೊಗರಿ, ಬೆಳೆಯುತ್ತಿದ್ದಾರೆ. | |
| **29)** | ❖ ಮೆಡಿಟೇರಿಯನ್ ಮತ್ತು ಯುರೋಪಿನ ವ್ಯಾಪಾರ ಇಟಲಿಯ ಏಕಸ್ವಾಮ್ಯಕ್ಕೆ ಒಳಪಟ್ಟಿತ್ತು.<br>❖ ಇಟಲಿಯ ಏಕಸ್ವಾಮ್ಯವನ್ನು ಮುರಿಯಲು ಪಶ್ಚಿಮ ಯುರೋಪಿಯನ್ ದೇಶಗಳಿಗೆ ಭಾರತಕ್ಕೆ ಪರ್ಯಾಯ ವ್ಯಾಪಾರ ಮಾರ್ಗವನ್ನು ಹುಡುಕುವ ಅನಿವಾರ್ಯತೆ ಉಂಟಾಯಿತು. | |
| **30)** | ❖ ನದಿಮುಖಜ ಭೂಮಿ/ಸಮುದ್ರ ತೀರ ಪ್ರದೇಶಗಳಲ್ಲಿ ಬೆಳೆಯುತ್ತವೆ.<br>❖ ಅಳಿವೆಗಳು ಕಂಡು ಬರುತ್ತವೆ.<br>❖ ಗಂಗಾ, ಮಹಾನದಿ ಕೃಷ್ಣ ಮುಖಜಭೂಮಿಗಳಲ್ಲಿ ಕಂಡುಬರುತ್ತವೆ. | ❖ 75 ರಿಂದ 250 ಸೆ.ಮೀ ಮಳೆ ಬೀಳುವ ಪ್ರದೇಶಗಳಲ್ಲಿ ಕಂಡು ಬರುತ್ತವೆ.<br>❖ ನಿರ್ದಿಷ್ಟ ಕಾಲದಲ್ಲಿ ಎಲೆ ಉದುರಿಸುತ್ತವೆ.<br>❖ ಬಾರತದಲ್ಲಿ ಹೆಚ್ಚು ವಿಸ್ತಾರವಾಗಿ ಹರಡಿವೆ. |
| **31)** | ❖ ಬೆಳಗಾವಿ, ಬಿಜಾಪುರ, ಧಾರವಾಡ & ಉತ್ತರ ಕನ್ನಡ. | |
| **32)** | ❖ ನಮ್ಮ ದೇಶದಲ್ಲಿ ವಿವಿಧತೆಯಲ್ಲಿ ಏಕತೆಯನ್ನು ಕಾಣಬಹುದು.<br>❖ ವಿವಿಧ ರೀತಿಯ ಮೇಲ್ಮೈಲಕ್ಷಣಗಳು, ವಾಯುಗುಣ, ಸ್ವಾಭಾವಿಕ ಸಸ್ಯವರ್ಗ & ಜನರಲ್ಲಿನ ವೈವಿಧ್ಯತೆಯನ್ನು ಕಾಣಬಹುದು.<br>❖ ಆದ್ದರಿಂದ ಭಾರತವನ್ನು ಒಂದು "ಉಪಖಂಡ" ಎಂದು ಕರೆಯಬಹುದಾಗಿದೆ. | |
| **33)** | ❖ ರಾಜಧಾನಿಯ ರಕ್ಷಣೆಗೆ ಕ್ರಮ ಕೈಗೊಂಡನು.<br>❖ ಫ್ರೆಂಚರಿಂದ ಸೈನ್ಯಕ್ಕೆ ತರಬೇತಿ ಕೊಡಿಸಿದನು.<br>❖ ಫ್ರಾನ್ಸ್, ಟರ್ಕಿ ಮೊದಲಾದ ದೇಶಗಳ ಸಹಾಯ ಪಡೆಯಲು ಪ್ರಯತ್ನಿಸಿದನು.<br>ಅಥವಾ<br>❖ ಬ್ರಿಟಿಷರ ಭೂಕಂದಾಯದ ನೀತಿಯ ವಿರುದ್ಧವಾಗಿ ಕೊಡಗಿನಲ್ಲಿ ಸ್ವಾಮಿ ಅಪರಾಂಪರ, ಕಲ್ಯಾಣ ಸ್ವಾಮಿ ಮತ್ತು ಪುಟ್ಟ ಬಸಪ್ಪ ರೈತರನ್ನು ಸಂಘಟಿಸಿ ಹೋರಾಡಲು ಪ್ರಯತ್ನಿಸಿದರು.<br>❖ ರೈತ ಸೈನ್ಯವು ಮಂಗಳೂರು ಸುತ್ತಮುತ್ತಲಿನ ಪ್ರದೇಶವನ್ನು 13ದಿನಗಳ ಕಾಲ ಆಡಳಿತ ಮಾಡಿದರು.<br>❖ ಮುಂದೆ ಬ್ರಿಟಿಷರು ಹೋರಾಟಗಾರರನ್ನು ಉಗ್ರವಾಗಿ ಶಿಕ್ಷಿಸುವುದರ ಮೂಲಕ ದಂಗೆಯನ್ನು ಹತ್ತಿಕ್ಕಿದರು. | |
| **34)** | 1.ಅರೆನಿರುದ್ಯೋಗ 2.ಮರೆಮಾಚಿದ ನಿರುದ್ಯೋಗ 3.ಚಕ್ರೀಯ ನಿರುದ್ಯೋಗ 4.ತಾಂತ್ರಿಕ ನಿರುದ್ಯೋಗ 5.ಸ್ವಇಚ್ಛೆಯ ನಿರುದ್ಯೋಗ | |
| **35)** | ❖ ವೇದಗಳು ಸತ್ಯ & ಅವುಗಳೇ ಜ್ಞಾನದ ಮೂಲವೆಂದು ಪ್ರತಿಪಾದಿಸಿದರು.<br>❖ ವೇದಗಳ ಕಾಲದ ಸಮಾಜವು ಅತ್ಯಂತ ಶ್ರೇಷ್ಠ ಮತ್ತು ಆದರ್ಶಪ್ರಾಯ ಸಮಾಜವೆಂದು ಸಾರಿದರು.<br>❖ ಆದ್ದರಿಂದ ದಯಾನಂದ ಸರಸ್ವತಿಯವರು 'ವೇದಗಳಿಗೆ ಹಿಂದಿರಿಗಿ' ಎಂದು ಜನತೆಗೆ ಕರೆಕೊಟ್ಟರು. | |
| **36)** | 1.ಇಳಿಜಾರಿಗೆ ಅಡ್ಡಲಾಗಿ ಉಳುಮೆ 2.ಅಡ್ಡ ಬದುಗಳ ನಿರ್ಮಾಣ 3.ಹಂತ ಹಂತ ಕೃಷಿ ಕ್ಷೇತ್ರಗಳ ನಿರ್ಮಾಣ<br>4.ಅರಣ್ಯ ನಾಶ ತಡೆಯುವುದು 5.ಮೇಯಿಸುವಿಕೆ ನಿಯಂತ್ರಣ 6.ನೀರಿನ ಯೋಜಿತ ಬಳಕೆ 7.ಚೆಕ್ ಡ್ಯಾಮ್‌ಗಳ ನಿರ್ಮಾಣ | |
| **37)** | 1.ರಾಷ್ಟ್ರೀಯ ಉಳಿತಾಯ ಪತ್ರ 2.ಅಂಚೆ ಉಳಿತಾಯ ಖಾತೆಗಳು 3.ಕಿಸಾನ್ ವಿಕಾಸ ಪತ್ರ 4.ಆವರ್ತ ಠೇವಣಿಗಳು 5.ಅಂಚೆ ವಿಮೆ 6.ನಿವೃತ್ತಿ ವೇತನ 7.ಹಣದ ವರ್ಗಾವಣೆ | |
| **38)** | 1.ನೀರಾವರಿ ಸೌಲಭ್ಯವನ್ನು ಒದಗಿಸುವುದು 3.ಜಲವಿದ್ಯುಚ್ಛಕ್ತಿಯನ್ನು ಉತ್ಪಾದನೆ 3.ನದಿಗಳ ಪ್ರವಾಹಗಳ ನಿಯಂತ್ರಣ<br>4.ನೌಕಾಯಾನ ಸೌಲಭ್ಯವನ್ನು ಒದಗಿಸುವುದು 5.ಮಣ್ಣಿನ ಸವಕಳಿಯ ನಿಯಂತ್ರಣ 6.ಮೀನುಗಾರಿಕೆಯ ಅಭಿವೃದ್ಧಿ | |
| **39)** | 1.ಮಾನ್ಸೂನ್ ಮಾರುತಗಳು 2.ಅಕ್ಷಾಂಶ 3.ಸಮುದ್ರ ಮಟ್ಟದಿಂದ ಇರುವ ಎತ್ತರ 4.ಸಾಗರಗಳಿಂದ ಇರುವ ದೂರ<br>5.ಮಾರುತಗಳ ದಿಕ್ಕು 6.ಸಾಗರ ಪ್ರವಾಹಗಳು 7.ಪರ್ವತಗಳು ಹಬ್ಬಿರುವ ರೀತಿ | |
| **40)** | ❖ಭಾರತಕ್ಕೆ ಹೈಕಮಿಷನರ್ ನೇಮಕ ಮಾಡಲಾಯಿತು.<br>❖ಕೇಂದ್ರದಲ್ಲಿ ದ್ವಿಸದಸ ಶಾಸಕಾಂಗ ಸ್ಥಾಪಿಸಲಾಯಿತು.<br>❖ಪ್ರಾಂತ್ಯಗಳಲ್ಲಿ ದ್ವಿ–ದಳ ಸರ್ಕಾರ ಜಾರಿಗೆ ತಂದಿತು.<br>❖ಆಡಳಿತ ವಿಷಯಗಳನ್ನು ಕೇಂದ್ರ ಪಟ್ಟಿ & ರಾಜ್ಯಪಟ್ಟಿ ಎಂದು ವಿಂಗಡಿಸಲಾಯಿತು.<br>❖ಭಾರತಕ್ಕೆ ಕ್ರಮೇಣ ಜವಾಬ್ದಾರಿ ಸರ್ಕಾರ ನೀಡುವ ಭರವಸೆ ನೀಡಿತು. | ❖ ಮಾನವ ಸೇವೆಯೇ ಪರಮಾತ್ಮನ ಸೇವೆ<br>❖ ವಿಧುವಾ ವಿವಾಹಕ್ಕೆ ಪ್ರೋತ್ಸಾಹ<br>❖ ಸ್ತ್ರೀ ಶಿಕ್ಷಣ ಪ್ರೋತ್ಸಾಹ<br>❖ ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹ<br>❖ ಸಹಭೋಜನಕ್ಕೆ ಪ್ರೋತ್ಸಾಹ<br>❖ ಬಾಲ್ಯವಿವಾಹ, ಜಾತಿಪದ್ಧತಿಗೆ ವಿರೋಧ<br>❖ ಪರ್ಧಾಪದ್ಧತಿಗೆ ವಿರೋಧ |
| **41)** | ❖ಉಚಿತ & ಕಡ್ಡಾಯ ಪ್ರಾಥಮಿಕ ಶಿಕ್ಷಣ ಜಾರಿಗೆ ತಂದಿದೆ. | ❖ ರಾಷ್ಟ್ರೀಯ ಹಿತಾಸಕ್ತಿಗಳು |

| | | |
|---|---|---|
| | ❖ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕರಣ.<br>❖2001ರಲ್ಲಿ ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮ ಜಾರಿಗೆ ತರಲಾಗಿದೆ.<br>❖2009ರಲ್ಲಿ ಶಿಕ್ಷಣ ಹಕ್ಕು ಕಾಯ್ದೆ ಜಾರಿಗೊಳಿಸಿದೆ.<br>❖ಮಹಿಳಾ ಶಿಕ್ಷಣ & ವಿಕಲಚೇತನರ ಶಿಕ್ಷಣಕ್ಕೆ ಆದ್ಯತೆ.<br>❖ವಯಸ್ಕ ಶಿಕ್ಷಣಕ್ಕಾಗಿ 1988ರಲ್ಲಿ ರಾಷ್ಟ್ರೀಯ ಸಾಕ್ಷರತಾ ಮಿಷನ್ ಸ್ಥಾಪನೆ. | ❖ ಭೌಗೋಳಿಕ ಅಂಶಗಳು<br>❖ ರಾಜಕೀಯ ಪರಿಸ್ಥಿತಿ<br>❖ ಆರ್ಥಿಕ ವ್ಯವಸ್ಥೆ<br>❖ ರಕ್ಷಣಾ ಸಾಮರ್ಥ್ಯ<br>❖ ಜನಾಭಿಪ್ರಾಯ<br>❖ ಅಂತರರಾಷ್ಟ್ರೀಯ ಪರಿಸರ |
| 42) | ❖ಸಂವಿಧಾನದ 17ನೇವಿಧಿಯು ಅಸ್ಪೃಶ್ಯತೆಯನ್ನು ತೊಡೆದು ಹಾಕಿದೆ.<br>❖ಸಂವಿಧಾನವು ಪರಿಶಿಷ್ಟ ಜಾತಿ & ಪಂಗಡಗಳಿಗೆ ಉದ್ಯೋಗದಲ್ಲಿ ಮೀಸಲಾತಿ ನೀಡಿದೆ.<br>❖ಸಂವಿಧಾವು ರಾಜಕೀಯ ಕ್ಷೇತ್ರದಲ್ಲಿ ಮೀಸಲಾತಿ ನೀಡಿದೆ<br>❖ಸಂವಿಧಾನವು ಪರಿಶಿಷ್ಟರಿಗೆ ಶೈಕ್ಷಣಿಕ ಸೌಲಭ್ಯ ಘೋಷಿಸಿದೆ.<br>❖ಸಾರ್ವಜನಿಕ ಧಾರ್ಮಿಕ ಕೇಂದ್ರಗಳಿಗೆ ಪ್ರವೇಶಿಸುವ ಮುಕ್ತ ಅವಕಾಶ ನೀಡಿದೆ.<br>❖1955ರಲ್ಲಿ ಅಸ್ಪೃಶ್ಯತಾ ಅಪರಾಧಗಳ ಕಾಯ್ದೆಯನ್ನು ಜಾರಿಗೆ ತರಲಾಗಿದೆ.<br>❖1978ರಲ್ಲಿ ಪರಿಶಿಷ್ಟಜಾತಿ&ಪಂಗಡಗಳ ಆಯೋಗವನ್ನು ರಚಿಸಲಾಗಿದೆ.<br>❖ವಿಶೇಷ ಜವಾಬ್ದಾರಿಯನ್ನು ರಾಜ್ಯಗಳಿಗೆ ವಹಿಸಲಾಗಿದೆ. | ❖ ದುಡಿಮೆ & ವೇತನ ಹಂಚಿಕೆಯಲ್ಲಿನ ತಾರತಮ್ಯವನ್ನೇ ದುಡಿಮೆಯ ತಾರತಮ್ಯ ಎನ್ನುತ್ತಾರೆ.<br>❖ ಬಹುತೇಕ ದೇಶಗಳಲ್ಲಿ ಪುರುಷರಿಗೆ ಉತ್ತಮ ಸ್ವರೂಪದ ಉದ್ಯೋಗವನ್ನು ನೀಡಲಾಗುತ್ತದೆ.<br>❖ ಸ್ತ್ರೀಯರಿಗೆ ಹೋಲಿಸಿದರೆ ಪುರುಷರಿಗೆ ಹೆಚ್ಚಿನ ಅಧಿಕಾರ, ಹೊಣೆಗಾರಿಕೆಯನ್ನು ನೀಡಲಾಗುತ್ತದೆ.<br>❖ ಸ್ತ್ರೀಯರಿಗೆ ಹೋಲಿಸಿದರೆ ಪುರುಷರಿಗೆ ಅಧಿಕ ವೇತನ, ಸೌಲಭ್ಯಗಳನ್ನು ನೀಡಲಾಗುತ್ತದೆ.<br>❖ ಅಲ್ಲದೆ ಕೆಲವು ಉದ್ಯೋಗಗಳನ್ನು ಪುರುಷರಿಗೆ ಮಾತ್ರ ಮೀಸಲಿಡಲಾಗಿದೆ. |
| 43) | ❖ಭೂ ಹಿಡುವಳಿ<br>❖ಜನಸಂಖ್ಯೆ<br>❖ಮಾರುಕಟ್ಟೆ<br>❖ವ್ಯವಸಾಯೋತ್ಪನ್ನಗಳ ಬೇಡಿಕೆ<br>❖ನೀರಾವರಿ ಲಭ್ಯತೆ,<br>❖ಭೂಮಿಯ ಮೌಲ್ಯ ಇತ್ಯಾದಿ. | ❖ ಅಸಂಪ್ರದಾಯಕ ಶಕ್ತಿ ಸಂಪನ್ಮೂಲಗಳನ್ನು ಹೆಚ್ಚಾಗಿ ಬಳಸುವುದು.<br>❖ ಜಲವಿದ್ಯುತ್ ಉತ್ಪಾದನೆಗೆ ಪ್ರಾಮುಖ್ಯತೆ ನೀಡುವುದು.<br>❖ ಬದಲಿ ಸ್ಥಳೀಯ ಸಂಪನ್ಮೂಲಗಳನ್ನು ಬಳಸುವುದು.<br>❖ ಅಸಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಬಳಕೆಗೆ ಪ್ರೋತ್ಸಾಹ ನೀಡುವುದು.<br>❖ ಶಕ್ತಿ ಸಂಪನ್ಮೂಲಗಳನ್ನು ಮಿತವಾಗಿ ಬಳಸಲು ತಿಳುವಳಿಕೆ ನೀಡುವುದು.<br>❖ ನಿರುಪಯುಕ್ತ ವಸ್ತುಗಳನ್ನು ಬಳಸಿ ವಿದ್ಯುತ್ ಉತ್ಪಾದಿಸುವುದು. |
| 44) | ❖ಕಡಿಮೆ ಉತ್ಪಾದನೆ<br>❖ಕಡಿಮೆ ರಾಷ್ಟ್ರೀಯ ಆದಾಯ & ತಲಾದಾಯ<br>❖ಕನಿಷ್ಠ ಮೂಲಭೂತ ಸೌಲಭ್ಯಗಳು<br>❖ಅನಕ್ಷರತೆ & ಬಡತನ<br>❖ಆರೋಗ್ಯ & ನೈರ್ಮಲ್ಯದ ಕೊರತೆ<br>❖ನಾಗರಿಕ ಸೌಲಭ್ಯದ ಕೊರತೆ<br>❖ನಿರುದ್ಯೋಗ ಮುಂತಾದವುಗಳು. | ❖ ರಾಷ್ಟ್ರೀಯ ಆದಾಯದಲ್ಲಿ ಹೆಚ್ಚಳ<br>❖ ತಲಾದಾಯದಲ್ಲಿ ಹೆಚ್ಚಳ<br>❖ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಭನೆ<br>❖ ಕೈಗಾರಿಕೆ&ಸೇವಾವಲಯಗಳ ವಿಸ್ತರಣೆ<br>❖ ವಿಜ್ಞಾನ & ತಂತ್ರಜ್ಞಾನದಲ್ಲಿ ಪ್ರಗತಿ<br>❖ ಬಡತನ & ನಿರುದ್ಯೋಗ ನಿವಾರಣೆಗೆ ಪ್ರಯತ್ನ |
| 45) | ಉಳಿತಾಯ ಖಾತೆ<br>❖ವೇತನ ಪಡೆಯುವವರು/ನಿಯಮಿತ ಆದಾಯ ಹೊಂದಿರುವ ಜನರು ಈ ಖಾತೆಯನ್ನು ತೆರೆಯುತ್ತಾರೆ.<br>❖ಚೆಕ್ಕು ಪುಸ್ತಕ/ಹಣ ಹಿಂದಕ್ಕೆ ಪಡೆಯುವ ಚೀಟಿಯ ಮೂಲಕ ಹಣವನ್ನು ಹಿಂಪಡೆಯಲು ಸಾಧ್ಯವಿದೆ.<br>❖ಈ ಠೇವಣಿಗಳಿಗೆ ಬಡ್ಡಿಯನ್ನು ನೀಡಲಾಗುತ್ತದೆ<br>ಚಾಲ್ತಿ ಖಾತೆ<br>❖ವ್ಯಾಪಾರಸ್ಥರು, ವಾಣಿಜ್ಯ & ಔದ್ಯೋಗಿಕ ಸಂಸ್ಥೆಗಳು ಈ ಖಾತೆಯನ್ನು ತೆರೆಯುತ್ತಾರೆ.<br>❖ಮರು ಪಾವತಿ, ಬೇಡಿಕೆ ಠೇವಣಿಗಳು ಮತ್ತು ಉಪಸರ್ಗ ವ್ಯವಹಾರಗಳ ಮೂಲಕ ಹಣವನ್ನು ಹಿಂಪಡಿಯಲು ಸಾಧ್ಯವಿದೆ.<br>❖ಈ ಠೇವಣಿಗಳಿಗೆ ಬಡ್ಡಿಯನ್ನು ನೀಡುವುದಿಲ್ಲ. | ಜೀವ ವಿಮೆ<br>❖ ಒಬ್ಬ ಮನುಷ್ಯನ ಜೀವಕ್ಕೆ ಸಂಬಂಧಿಸಿದ ವಿಮೆ.<br>❖ ದೀರ್ಘಕಾಲದಿಂದ ಕೂಡಿರುತ್ತದೆ.<br>❖ ನಷ್ಟ ಪರಿಹಾರ ತತ್ವ ಸೇರಿರುವುದಿಲ್ಲ.<br>❖ ಅಜೀವ ವಿಮಾ ಪಾಲಿಸಿ, ಆರೋಗ್ಯ ಪಾಲಿಸಿ ಇತ್ಯಾದಿ.<br>ಸಾಮಾನ್ಯ ವಿಮೆ<br>❖ ಜೀವವಿಲ್ಲದ ವಸ್ತುಗಳ ವಿಮೆಯಾಗಿದೆ.<br>❖ ಈ ವಿಮೆಯು ಅಲ್ಪ ಕಾಲಿಕವಾದುದು.<br>❖ ನಷ್ಟ ಪರಿಹಾರ ತತ್ವ ಸೇರಿರುತ್ತದೆ.<br>❖ ವಾಹನ ವಿಮೆ, ಬೆಂಕಿ ಅಪಘಾತ ವಿಮೆ ಇತ್ಯಾದಿ. |

| | |
|---|---|
| **46)** | <u>ರಾಜಕೀಯ ಕಾರಣಗಳು</u><br>❖ ಲಾರ್ಡ್ ಡಾಲ್ ಹೌಸಿಯ ದತ್ತು ಮಕ್ಕಳಿಗೆ ಹಕ್ಕಿಲ್ಲ ಪದ್ಧತಿ.<br>❖ ಸತರಾ, ಜಾನ್ಸಿ, ಜೈಪುರ್ ಮೊದಲಾದವು ಬ್ರಿಟಿಷರ ವಶವಾದುದು.<br>❖ ತಂಜಾವೂರು & ಆರ್ಕಾಟ್ ನವಾಬನ ರಾಜಪದವಿ ರದ್ಧತಿ.<br>❖ ಮೊಘಲ್ ದೊರೆ & ಅವದ್ ನವಾಬನ ಪದಚ್ಯುತಿ.<br>❖ ಅಧಿಕಾರ ಕಳೆದಕೊಂಡ ರಾಜರ ಅಸಮಾಧಾನ.<br>❖ ಸೈನಿಕರ ನಿರುದ್ಯೋಗ.<br><u>ಆರ್ಥಿಕ ಕಾರಣಗಳು</u><br>❖ ಇಂಗ್ಲೆಂಡಿನಲ್ಲಾದ ಕೈಗಾರಿಕಾ ಕ್ರಾಂತಿ<br>❖ ಭಾರತೀಯ ವಸ್ತುಗಳ ಮೇಲೆ ವಿಧಿಸುತ್ತಿದ್ದ ಅಧಿಕ ತೆರಿಗೆ<br>❖ ಭಾರತೀಯ ಗೃಹ ಕೈಗಾರಿಕೆಗಳ ಅವನತಿ<br>❖ ಲಕ್ಷಾಂತರ ಕಾರ್ಮಿಕ ನಿರುದ್ಯೋಗ<br>❖ ಕಂದಾಯಕ್ಕಾಗಿ ರೈತರ ಶೋಷಣೆ<br>❖ ಇನಾಂ ಭೂಮಿಯನ್ನು ವಾಪಾಸ್ ಪಡೆದಿದ್ದು |
| **47)** | <br> |